**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

ಸಿ.ಸಿ. ಸಂಖ್ಯೆ: **1113/2023**

ಪಿರ್ಯಾದಿ : ರಾಜ್ಯ, ಪರವಾಗಿ ಕಳಸ ಪೊಲೀಸ್ ಠಾಣೆ,
ಕಳಸ ತಾಲ್ಲೂಕು.

ವಿರುದ್ಧ

ಆರೋಪಿತರು : **1.** ಮೊಹ್ಮದ್ ಷರೀಫ್,
ವಯಸ್ಸು ಸುಮಾರು 45 ವರ್ಷ,
ಬಿನ್ ವಿ.ಹೆಚ್.ಯಾಕುಬ್,
ವಾಸ: ಆಡ್ಯಾರ್ ವಲಾಚಿ,
ಆಡ್ಯಾರ್ ಗ್ರಾಮ, ಕಣ್ಣೂರು ಅಂಚೆ,
ಮಂಗಳೂರು ತಾಲ್ಲೂಕು,
ದಕ್ಷಿಣ ಕನ್ನಡ ಜಿಲ್ಲೆ.

:**2.** ಶಾಲ್ ಎಸ್,
ವಯಸ್ಸು ಸುಮಾರು 39 ವರ್ಷ,
ಬಿನ್ ಸುರೇಂದ್ರ ಡಿ., ವಾಸ: #2-38/1A,
ಕೂಳೂರು, ಕುದ್ರು ಮನೆ, ಪಡುಕೋಡಿ,
ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

:**3.** ಲತೇಶ್,
ವಯಸ್ಸು ಸುಮಾರು 28 ವರ್ಷ,
ಬಿನ್ ಯಶೋಧರ, ವಾಸ: #1-2, 131/16,
ಸುಂಕದಕಟ್ಟೆ, ದರೆಬೈಲು, ಅಶೋಕನಗರ,
ಮಂಗಳೂರು ನಗರ, ದಕ್ಷಿಣ ಕನ್ನಡ ಜಿಲ್ಲೆ.

ದೋಷಾರೋಪಣೆ

ಶ್ರೀಮತಿ ಸುರಕ್ಷ ಕೆ.ಕೆ., 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆ:-

ದಿನಾಂಕ 23-24.02.2023 ರಂದು ರಾತ್ರಿ 02.30 ರ ಸಮಯದಲ್ಲಿ ಕಳಸ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆರೋಪಿತರಾದ ನೀವುಗಳು ಕಳಸ ತಾಲ್ಲೂಕು, ಮಾವಿನಕೆರೆ ಗ್ರಾಮದ ಬಾಳೆಹೊಳೆ ಎಂಬಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಕಳಸ, ಬಾಳೆಹೊಳೆ ಶಾಖೆಯ ಕಟ್ಟಡದ ಮುಂಭಾಗದಲ್ಲಿ ಹಾದುಹೋಗಿರುವ ಕಳಸ-ಬಾಳೆಹೊನ್ನೂರು ಮದ್ಯದ ರಸ್ತೆಯಲ್ಲಿ ಮಲಗಿದ್ದ ಒಂದು ಹೋರಿಯನ್ನು ನಿಮ್ಮ ಪೈಕಿ 1 ನೇ ಆರೋಪಿಗೆ ಸೇರಿದ ಬಾಬ್ತು ವಾಹನ ನೋಂದಣಿ ಸಂಖ್ಯೆ: ಕೆಎ-19-ಎಬಿ-

8468 ವಾಹನದಲ್ಲಿ ಅಕ್ರಮವಾಗಿ ಕಡಿದು ಮಾಂಸ ಮಾಡಿ ಮಾರಾಟ ಮಾಡುವ ಉದ್ದೇಶದಿಂದ ಕಳ್ಳತನ ಮಾಡಿ ತುಂಬಿಕೊಂಡು ಬಾಳೆಹೊಳೆಯಿಂದ ಕಗ್ಗನಹಳ್ಳ-ಮಾಗುಂಡಿ ಕಡೆಗೆ ಸಾಗಾಟ ಮಾಡುತ್ತಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ **379** ಸಹ ಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಂದ ಮುಂದುವರೆದು, ಆರೋಪಿತರುಗಳಾದ ನೀವುಗಳು ಕಾನೂನು ಬಾಹಿರವಾಗಿ, ಅಕ್ರಮವಾಗಿ ಹೆಚ್ಚಿನ ಹಣವನ್ನು ಗಳಿಸುವ ಉದ್ದೇಶದಿಂದ, ಒಂದು ಹೋರಿಯನ್ನು ನಿಮ್ಮ ಪೈಕಿ 1 ನೇ ಆರೋಪಿಗೆ ಸೇರಿದ ಬಾಬ್ತು ವಾಹನ ನೋಂದಣಿ ಸಂಖ್ಯೆ: ಕೆಎ-19-ಎಬಿ-8468 ವಾಹನದಲ್ಲಿ ಅಕ್ರಮವಾಗಿ ಕಡಿದು ಮಾಂಸ ಮಾಡಿ ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡುತ್ತಿದ್ದ ಸಂದರ್ಭದಲ್ಲಿ ಪೊಲೀಸರು ನಡೆಸಿದ ದಾಳಿಗೆ ಸಿಕ್ಕಿಬಿದ್ದಿರುತ್ತೀರಿ**.** ಈ ರೀತ್ಯಾ ಆರೋಪಿತರಾದ ನೀವುಗಳು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ **12** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ***?***

**3.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಂದ ಮುಂದುವರೆದು, ಸಾಕ್ಷಿ ರಾಜೇಶ್ ಹಾಗೂ ಸಾಕ್ಷಿದಾರರಾದ ವಿದ್ಯಾನಂದ ಎನ್.ಜಿ., ಸುಬ್ರಹ್ಮಣ್ಯ ಕೆ.ಪಿ., ವಿಶ್ವಾಸ್ ಟಿ., ಕಾರ್ತಿಕ್, ಕೌಶಿಕ್ ಬಿ.ಎಸ್. ಪ್ರಜ್ವಲ್ ಬಿ.ವಿ., ಜನಾರ್ಧನ ಆರ್., ಶ್ರಯಣ್ ಕುಮಾರ್ ಬಿ. ಯಾನೆ ಶಯಣ ರವರು ಕಾರಿನಲ್ಲಿ ಆರೋಪಿತರಾದ ನಿಮ್ಮನ್ನು ಹಿಂಭಾಲಿಸಿದಾಗ ಕಗ್ಗನಹಳ್ಳ ಬಳಿಯು ರಸ್ತೆಯಲ್ಲಿ ಆರೋಪಿತರಾದ ನೀವುಗಳು ನಿಮ್ಮ ವಾಹನವನ್ನು ನಿಲ್ಲಿಸಿ, ವಾಹನದಿಂದ 2 ಮತ್ತು 3 ನೇ ಆರೋಪಿತರಾದ ನೀವುಗಳು ಇಳಿದು, ವಾಹನದಲ್ಲಿದ್ದ ಜಾಕ್ ಲಿವರ್ ಮತ್ತು ಕಬ್ಬಿಣದ ರಾಡ್ ನಂತಹ ಮಾರಕಾಸ್ತ್ರಗಳನ್ನು ಹಿಡಿದು ಸಾಕ್ಷಿದಾರರನ್ನು ಹೆದರಿಸಲು ಪ್ರಯತ್ನಿಸಿ, ವಾಹನದಲ್ಲಿದ್ದ ಕಲ್ಲಂಗಡಿ ಮತ್ತು ಟೊಮೋಟೋಗಳನ್ನು ಸಾಕ್ಷಿದಾರರ ಕಾರ್ ಗಳ ಕಡೆಗೆ ಎಸೆದು, ವಾಹನದಲ್ಲಿದ್ದ ಹೋರಿಯನ್ನು ಅಲ್ಲಿಯೇ ಕೆಳಗೆ ಬಿಳಿಸಿ, ಗಾಯಗೊಳಿಸಿರುತ್ತೀರಿ. ಈ ರೀತ್ಯಾ ಆರೋಪಿತದ ನೀವುಗಳು ಭಾರತ ದಂಡ ಸಂಹಿತೆ ಕಲಂ **506(2)** ಸಹ ಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**4.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಂದ ಮುಂದುವರೆದು, ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು ವಾಹನವನ್ನು ಗುರ್ತಿಸದಂತೆ ಮಾಡುವ ಉದ್ದೇಶದಿಂದ ಕೃತ್ಯಕ್ಕೆ ಬಳಸಿದ್ದ ವಾಹನದ ಹಿಂಭಾಗದ ನಂಬರ್ ಪ್ಲೇಟ್ ನಲ್ಲಿದ್ದ ವಾಹನದ ರಿಜಿಸ್ಟ್ರೇಷನ್ ತೆಗೆದು ಸಾಕ್ಷ್ಯ ನಾಶಪಡಿಸಿರುತ್ತೀರಿ. ಈ ರೀತ್ಯಾ ಆರೋಪಿತದ ನೀವುಗಳು ಭಾರತ ದಂಡ ಸಂಹಿತೆ

ಕಲಂ **201** ಸಹ ಕಲಂ **34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ.

ಪ್ರ: 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ***?*** ಅವುಗಳು ನಿಮಗೆ ಅರ್ಥವಾಯಿತೇ***?***

1 ನೇ ಆರೋಪಿಯ ಉತ್ತರ:

2 ನೇ ಆರೋಪಿಯ ಉತ್ತರ:

3 ನೇ ಆರೋಪಿಯ ಉತ್ತರ:

ಪ್ರ: 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ***?***

1 ನೇ ಆರೋಪಿಯ ಉತ್ತರ:

2 ನೇ ಆರೋಪಿಯ ಉತ್ತರ:

3 ನೇ ಆರೋಪಿಯ ಉತ್ತರ:

***(***ಆರೋಪಿತರಿಗೆ ದಿನಾಂಕ 04.06.2026 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ***)***

ಸಹಿ**/-**

ಮೂಡಿಗೆರೆ
ದಿನಾಂಕ: 04.06.2026

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.